(ಆ) ತುಂಗಭದ್ರ ಎಡದಂಡೆ ಕಾಲುವೆಯ ದುರಸ್ತಿಯಲ್ಲಿ ವಿಳಂಬ.

ಶ್ರೀ ಕೆ. ವಿರುಪಾಕ್ಷಪ್ಪ (ಸಿಂಧನೂರು) :- ಮಾನ್ಯ ಅಧ್ಯಕ್ಷರೇ, ತುಂಗಾಭದ್ರಾ ಎಡದಂಡೆ ಕಾಲುವೆಯ ಒಳಮೈ ಬಲಪಡಿಸುವಂತಹ ಕಾರ್ಯವನ್ನು ಪ್ರತಿವರ್ಷ ಕೈಗೆತ್ತಿಕೊಳ್ಳಲಾಗುತ್ತಿದೆ. ಆದರೆ 70 ದಿವಸದಲ್ಲಿ ಆ ಕೆಲಸವನ್ನು ಮುಗಿಸಬೇಕಾಗಿದ್ದು 105-110 ದಿವಸಗಳಾಗಿದ್ದರೂ ಕೂಡ ಇನ್ನು ಮುಗಿಸುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಹಾಗಾಗಿ ಅಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದೆ ಮತ್ತು ಕನಿಷ್ಟ ಆರು ಲಕ್ಷ ಎಕರೆ ಮುಂಗಾರು ಬೆಳೆ ಹಾನಿಯಾಗುವಂತಹ ಪರಿಸ್ಥಿತಿ ಇದೆ. ಈ ಕಾರ್ಯ ತಡವಾಗುವುದಕ್ಕೆ ಮುಖ್ಯವಾಗಿ ಸರ್ಕಾರದ ಬೇಜವಾಬ್ದಾರಿ ಕಾರಣ ಎಂದು ನನ್ನ ತಿಳುವಳಿಕೆಗೆ ಬಂದಿರತಕ್ಕಂಥಾದ್ದು. ಸರ್ಕಾರ ಈ ಕಾಲುವೆ ಕೆಲಸವನ್ನು ಪ್ರಾರಂಭಿಸುವುದಕ್ಕೆ ತಡಮಾಡಿತು. ಇದು ಒಂದು ಕಾರಣ. ಇನ್ನು ಎರಡನೆಯದಾಗಿ ಗುತ್ತಿಗೆದಾರರಿಗೆ ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡದೆ ಈ ರೀತಿಯ ವಿಳಂಬವಾಗಿದೆ ಇದರಿಂದಾಗಿ ಇವತ್ತು ಆರು ಲಕ್ಷ ಎಕರೆ ಮುಂಗಾರು ಬೆಳೆ ಹಾನಿಯಾಗಲಿದೆ. ಆದಕಾರಣ ಸರ್ಕಾರ ಈ ಬಗ್ಗೆ ಏನು ಉತ್ತರ ಕೊಡುತ್ತದೆ? ಈ ಹಾನಿಯನ್ನು ಯಾವ ರೀತಿ ಭರಿಸುತ್ತದೆ ಎನ್ನುವುದನ್ನೂ ಸಹ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ) :- ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಮೊನ್ನೆತಾನೇ ನೋಡಿದೆ, ಅದೇನೆಂದರೆ ಎಡದಂಡೆ ಕಾಲುವೆಯಲ್ಲಿ ನೀರು ಬಿಡಲಾಗಿದೆ ಎಂದು. ಆದರೆ ಸರ್ಕಾರದ ಕೆಲಸ ಮುಗಿದು ಹೋಯಿತು. ಆದರೆ ಅದು ಎಲ್ಲಿಯವರೆಗೆ ಆಗಿದೆ? ಮೊನ್ನೆ ನಾವು ನಮ್ಮ ನಾಯಕರು ಹೋದಾಗ ಎಡದಂಡೆ ಕಾಲುವೆಯ ಇನ್ನರ್‌ಸ್ಟ್ರೆಂಗ್ತನ್ ಮಾಡುತ್ತಿರಬೇಕಾದರೆ ಸುಮಾರು ಎರಡು ಅಡಿ ಮಣ್ಣು ಕಾಲುವೆಯಲ್ಲಿ ಇತ್ತು. ಅದನ್ನು ತೆಗೆದಿಲ್ಲ. ಹಾಗೂ ಅಲ್ಲಿ ಸುಮಾರು ಕೆಲಸವಾಗಿದೆ. ಅಲ್ಲಿ 250 ಕ್ಯೂಸೆಕ್ಟ್ ನೀರು ಬಿಟ್ಟಾಗ ಆ ಕೆನಾಲ್ ಮೇಲೆ ನಾನು ಹೋದಾಗ ಆಗಲೇ ಅಲ್ಲಿ ನೀರು ಸೋರುತ್ತಾ ಇತ್ತು. ನಾನು ಇಷ್ಟು ಹೇಳಬಲ್ಲೆ ಎರಡು ಅಡಿ ನೀರು ಕಾಲುವೆಯಲ್ಲಿ ಇದ್ದರೆ ಅದರ ಕ್ವಾಂಟಿಟಿ ಕಡಿಮೆಯಾಗಿ 3,500 ಕ್ಯೂಸೆಕ್ಟ್ ನೀರು ಹಿಡಿಯುತ್ತಾ ಇಲ್ಲ. ಅದು ಮೇಲೆ ಬರುತ್ತದೆ. ಅದು ಅಲ್ಲದೆ ನೀರು ಹೆಚ್ಚಿಗೆ ಬಿಡುತ್ತಾ ಇದ್ದರೇ ಸಾಣಾಪುರ್ ರಿಸರ್ವಾಯರ್‌ನಲ್ಲಿ ಮಣ್ಣು ಬಂದು ತುಂಬಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹಿಡಿಯದ ಹಾಗೆ ಮತ್ತು ರಿಸರ್ವಾಯರ್ ಲೆವೆಲ್‌ನಲ್ಲಿ ಹೆಚ್ಚು ಕಟ್ಟ ಬೇಕಾಗುತ್ತದೆ. ಅದಲ್ಲದೆ ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇಷ್ಟು ಕೋಟ್ಯಾಂತರ ರೂಪಾಯಿಗಳ ಕೆಲಸ ಆಗುತ್ತಿದ್ದರೂ ಕೂಡ ಅದನ್ನು ಗಮನಿಸುವುದಕ್ಕೆ ಬೆಂಗಳೂರಿನಿಂದ ಯಾವ ಅಧಿಕಾರಿಯೂ ಕೂಡ ಬಂದಿಲ್ಲ. ಬರೀ ಚೀಫ್ ಇಂಜಿನಿಯರ್ ಮಾತ್ರ ಅಲ್ಲಿ ಕೆಲಸ ಮಾಡಿದ್ದಾರೆ. ಬಹಳ ಲೋ ಸ್ಟ್ಯಾಂಡರ್ಡ್ ಕೆಲಸ ಆಗಿದೆ. ದಯಮಾಡಿ ನಾನು ತಮ್ಮ ಮುಖಾಂತರ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ತಕ್ಷಣ ಅವರು ಅಲ್ಲಿಗೆ ಬರಬೇಕು ಏಕೆಂದರೆ ನೀರನ್ನು ಜಾಸ್ತಿ ಬಿಟ್ಟರೆ ಒಳಗಡೆ ಎಷ್ಟು ಮಣ್ಣಿದೆ, ಏನಿದೆ ಯಾವ ಪ್ರಕಾರ ಆಗಿರಬಹುದು ಎಂಬುದನ್ನು ಗುರುತು ಹಿಡಿಯುವುದು ಕಷ್ಟವಾಗುತ್ತದೆ. ತಕ್ಷಣ ಮಂತ್ರಿಗಳು ಬಂದು ಅಲ್ಲಿ ವಿಚಾರ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಅಧ್ಯಕ್ಷರೆ, ಕಾಲುವೆ

ಒಡೆದುಹೋದರೆ ಜನರಿಗೆ ಒಂದು ಭೀತಿಯ ಪರಿಸ್ಥಿತಿ ಬರುತ್ತದೆ. ರಾತ್ರಿ ಹೊತ್ತು ನಿದ್ದೆ ಮಾಡುವುದೂ ಕೂಡ ಕಷ್ಟವಾಗುತ್ತದೆ. ನನಗೆ ಗೊತ್ತಿರುವ ಹಾಗೆ ಯದ್ಲಾಳ್ ಹಳ್ಳಿ ಪಕ್ಕದಲ್ಲಿ ಆಗಲೇ ಸೋರುತ್ತಾ ಇದೆ. ನಾನು ಬೇಕಾದರೆ ಮಂತ್ರಿಯವರನ್ನು ಕರೆದು ಕೊಂಡು ಹೋಗಿ ತೋರಿಸುತ್ತೇನೆ, ನೀರು ಅಲ್ಲಿ ಲೀಕ್ ಆಗುತ್ತಾ ಇದೆ. ಬರೀ 250 ಕ್ಯೂಸೆಕ್ಸ್ ನೀರು ಬಿಟ್ಟಾಗ ನೀರು ಲೀಕ್ ಆಗುತ್ತದೆ ಇನ್ನು 3500 ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಆ ಕಾಲುವೆಯ ಪರಿಸ್ಥಿತಿ ಏನಾಗಬಹುದು ಎಂದು ನನಗೆ ಆರ್ಥವಾಗುತ್ತಾ ಇಲ್ಲ. ಯದ್ಲಾಳ್‌ನಲ್ಲಿ ಸಾಧಾರಣವಾಗಿ ಹತ್ತು ಸಾವಿರ ಜನಸಂಖ್ಯೆ ಇದೆ. ನನಗೆ ಅಲ್ಲಿ ಏಳು ಹಳ್ಳಿಗಳು ಪಕ್ಕದಲ್ಲಿ ಬರುತ್ತದೆ, ನನಗೆ ನಿಜವಾಗಲೂ ಬಹಳ ಒಂದು ಹೆದರಿಕೆ ಇದೆ, ಯಾವ ಸಮಯದಲ್ಲಿ ಕಾಲುವೆ ಏನಾಗುತ್ತದೆಯೋ ಗೊತ್ತಿಲ್ಲ, ದಯಮಾಡಿ ಮಂತ್ರಿಗಳು ಬಂದು ನೋಡಬೇಕು ಮತ್ತು ಕಾರ್ಯದರ್ಶಿಗಳಾಗಲೀ, ಬೆಂಗಳೂರಿನ ಅಧಿಕಾರಿಗಳಾಗಲೀ, ತಜ್ಞರಾಗಲೀ ಬಂದು ನೋಡಿದರೆ ಮಾತ್ರ ನಮಗೆ ಒಂದು ಧೈರ್ಯ ಬರುತ್ತದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಎನ್ ನಾಗೇಗೌಡ (ಭಾರೀ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ತುಂಗಭದ್ರಾ ಎಡದಂಡೆ ಕಾಲುವೆಯ ಒಳಮೈ ಭದ್ರತಾ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ, ಇನ್ನು ಶೇಕಡ 20 ರಷ್ಟು ಕೆಲಸ ಉಳಿದು ಕೊಂಡಿದೆ 28-7-96 ರಿಂದ ಬೆಳಿಗ್ಗೆ 9-30 ಗಂಟೆಗೆ 50 ಕ್ಯೂಸೆಕ್ಸ್‌ನಂತೆ ನೀರನ್ನು ಬಿಡಲು ಪ್ರಾರಂಭ ಮಾಡಿ ಇವೊತ್ತು 950 ಕ್ಯೂಸೆಕ್ಸ್ ನೀರನ್ನು ಬೆಳಿಗ್ಗೆ ಬಿಟ್ಟಿದ್ದಾರೆ. ಆದು inner strength of the Canal ಆದ್ದರಿಂದ ಆದು ಸೆಟ್ ಆಗಬೇಕಾದರೆ, it requires time. Slowly and gradually we must increase the discharge of water. ಆದ್ದರಿಂದ ಈಗ 50 ಕ್ಯೂಸೆಕ್ಸ್‌ವರೆಗೆ ಹೋಗಿದೆ 5-8-96 ಕ್ಕೆ ನಾವು ಫುಲ್ ಕೆಪಾಸಿಟಿಯಲ್ಲಿ ಆ ಅಚ್ಚುಕಟ್ಟು ಏರಿಯಾಕ್ಕೆ ಎಷ್ಟು ನೀರು ಬೇಕೋ ಅಷ್ಟು ನೀರನ್ನು ಬಿಡುವುದಕ್ಕೆ 5-8-96 ಕ್ಕೆ ಅಷ್ಟು ನೀರನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ಕೆನಾಲ್ ರೆಡಿ ಇರುತ್ತದೆ. ಎನ್ನತಕ್ಕಂಥದ್ದು ಒಂದು ಮಾತು. ಎರಡನೆಯದಾಗಿ ಅವರು ಹೇಳಿದರು ಕಳಪೆ ದರ್ಜೆಯ ಕೆಲಸ ಆಗಿದೆ ಕಾರ್ಯದರ್ಶಿಗಳವರಾಗಲಿ, ಮಂತ್ರಿಗಳಾಗಲೀ ಯಾರಾದರೂ ಬಂದು ನೋಡಬೇಕೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಅಧಿವೇಶನ ಮುಗಿದ ಮೇಲೆ ನಾವೇ ಆ ಭಾಗಕ್ಕೆ ಹೋಗಬೇಕೆಂದು ಇದ್ದೇವೆ. ಅಧಿವೇಶನ ಮುಗಿದ ತಕ್ಷಣವೇ ನಮ್ಮ ಮೊಟ್ಟಮೊದಲ ಭೇಟಿಯೇ ತುಂಗಭದ್ರಾ ಲೆಫ್ಟ್ ಬ್ಯಾಂಕ್ ಕೆನಾಲ್ ಆಗಿರುತ್ತದೆ. ಈಗ ನಿಮಗೆ 950 ರಿಂದ 1500, 2000 ರವರೆಗೆ ಗ್ಯಾಜುಯಲ್ ಆಗಿ ಇನ್‌ಕ್ರೀಜ್ ಮಾಡಿ ಅಚ್ಚುಕಟ್ಟಿಗೆ ಎಷ್ಟೆಷ್ಟು ನೀರು ಕೊಡಬೇಕು ಎಂದು ನೋಡಿಕೊಂಡು ಕೊಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- 20 ಕೋಟಿ ರೂಪಾಯಿ ಆದಕ್ಕೆ ಪ್ರಾವಿಷನ್ ಇಟ್ಟಿದ್ದುದು, ನಾನು ಕೇಳುತ್ತೇನೆ ಎಷ್ಟು ಖರ್ಚಾಗಿದೆ ಹೇಳಲಿ. ಏಕೆಂದರೆ ಅರ್ಧಂಬರ್ಧ ಮಣ್ಣೆಲ್ಲ ಆದರಲ್ಲಿ ಬಿದ್ದಿದೆ. ನಾನು ಸ್ವತಃ ಸುಮಾರು 64 ಕಿಲೋ ಮೀಟರ್

ಹೋಗಿಬಂದಿದ್ದೇನೆ. ಆಮೇಲೆ ಅಲ್ಲಿಯ ಕಾಂಟ್ರಾಕ್ಟರ್‌ಗಳು ಯಾರು ಎಂದರೆ, ಒಬ್ಬ ಟೀಚರ್‌ಗೆ, ಒಬ್ಬ ವಿಲೇಜ್ ಅಕೌಂಟೆಂಟ್ ಆಮೇಲೆ ರಿಟೈರ್ಡ್ ಇಂಜಿನಿಯರ್ಸ್ ಇಂತಹವರಿಗೆ ಕೊಟ್ಟಿದ್ದಾರೆ, ಒಬ್ಬರೂ ಕ್ವಾಲಿಫೈಡ್ ಇಲ್ಲ, ಅವರಿಗೊಂದು ಮೆಷನರೀಸ್ ಇಲ್ಲ, ಏನೂ ಇಲ್ಲ ಇವರು ಎಲ್.ಓ.ಸಿ.ಯನ್ನೂ ಕೂಡ ಬಿಡುಗಡೆ ಮಾಡಿಲ್ಲ, ಕಳೆದ ಬಾರಿ ಇಲ್ಲಿ ಗಲಾಟೆ ಆದಮೇಲೆ 8 ಕೋಟಿ ರೂಪಾಯಿ ಕೊಟ್ಟಿದ್ದೇವೆನ್ನುತ್ತಾರೆ, ಆದೂ ಮುಟ್ಟಿಲ್ಲ ಹೀಗಾಗಿ ಕೆಲಸ ಹೇಗಾಗುತ್ತದೆ ಅಧ್ಯಕ್ಷರೇ? ಬೇಕಾದರೆ ನೀವು ಹೋಗಿ ನೋಡಿಕೊಂಡು ಬನ್ನಿ.

ಶ್ರೀ ಕೆ. ಎನ್. ನಾಗೇಗೌಡ :- ಒಂದು ನಿಮಿಷ ತಾವು ಕುಳಿತುಕೊಳ್ಳಿ, ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ 8 ಕೋಟಿ ಎಲ್.ಓ.ಸಿ. ಕೊಟ್ಟಿಲ್ಲ ಎಂದೂ ಪ್ರಸ್ತಾಪ ಮಾಡಿದರು. ಎಲ್.ಓ.ಸಿಯನ್ನು ಈಗಾಗಲೇ ಕಳುಹಿಸಿ ಕೊಟ್ಟಿದ್ದೇವೆ, ಅದು ಮುಟ್ಟದೇ ಇದ್ದರೆ ನಾನು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಇಲ್ಲಿ ಹಣಕಾಸಿನ ಸಚಿವರೂ ಕೂಡ ಇದ್ದಾರೆ, ತಮಗೆ ಹೇಳುವುದಾದರೆ ಇದು 19 ಕೋಟಿ ರೂಪಾಯಿಯ ಕೆಲಸ ಆದು. ಎಲ್ಲಾ ವೇರಿಯಸ್ ಸ್ಟೇಜ್‌ನಲ್ಲಿ ಕೆಲಸ ಆಗಬೇಕಾಗಿದೆ. ನಿಜವಾಗಿಯೂ ಹೇಳುವುದಾದರೆ ಒಂದೂವರೆ ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿತ್ತು. ಈ ಎರಡು ತಿಂಗಳಿನಲ್ಲಿ ನಾವು 8 ಕೋಟಿ ಬಿಟ್ಟು 91/2 ಕೋಟಿ ಬಿಡುಗಡೆ ಮಾಡಿದ್ದೇವೆ. ಹಣಕಾಸಿನ ತೊಂದರೆ ಇಲ್ಲ. ಅಲ್ಲಿರತಕ್ಕಂಥ ತೊಂದರೆ ಟೆಕ್ನಿಕಲ್ ಆಗಿ ಅವರು ಹೇಳಿದರು ಯಾರುಯಾರು ಕಂಟ್ರಾಕ್ಟ್ ಮಾಡುತ್ತಿದ್ದಾರೆ ಅರ್ಹರಲ್ಲದ ಕಂಟ್ರಾಕ್ಟರ್ಸ್ ಇದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ಅರ್ಹರಲ್ಲದ ಗುತ್ತಿಗೆದಾರರು ಇದ್ದರೆ I will hold the Chief Engineer responsible ನಾನು ಪುನಃ ಅಲ್ಲಿಗೆ ಕ್ವಾಲಿಟಿ ಕಂಟ್ರೋಲರನ್ನು ಕಳುಹಿಸಿಕೊಟ್ಟಿದ್ದೇನೆ, ಅವರೂ ಹೋಗಿ ನೋಡಿಕೊಂಡು ಬಂದಿದ್ದಾರೆ, ಸಹಜವಾಗಿ ಅವರು ಹೋಗಿದ್ದ ದಿವಸ ಇದ್ದಂಥ ಪರಿಸ್ಥಿತಿಗೂ ಇವೊತ್ತು ಇರತಕ್ಕಂಥ ಪರಿಸ್ಥಿತಿಗೂ ಖಿರ್ಗಿಯವರೇ ಬಹಳ ವ್ಯತ್ಯಾಸ ಇದೆ, ನೀವು ಹೋಗಿ ನೋಡಿ, ಬೇಕಾದರೆ ನನ್ನ ಜೊತೆಯಲ್ಲೇ ಬನ್ನಿ ಅಧಿವೇಶನ ಮುಗಿದ ತಕ್ಷಣವೇ ಹೋಗೋಣ. ನಾನು ಹೋಗಿಲ್ಲ ಎಂದು ಒಪ್ಪಿಕೊಂಡಿದ್ದೇನಲ್ಲ, ನೀವು ಹೋಗುವುದಕ್ಕೆ ಬಿಟ್ಟರೆ ತಾನೆ, ಶೂನ್ಯವೇಳೆಯಲ್ಲೂ ಬಿಡುವುದಿಲ್ಲ, ಬೆಳಿಗ್ಗೆ ಹೊತ್ತು ಬಿಡುವುದಿಲ್ಲ, ಸಾಯಂಕಾಲವೂ ಬಿಡುವುದಿಲ್ಲ.....

(೫) ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಕ್ರೀಡಾ ಚಟುವಟಿಕೆ.

+ ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಕ್ರೀಡಾಚಟುವಟಿಕೆಗಳಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಕರು ಪ್ರಚೋದನೆ ನೀಡಬೇಕಾಗಿದೆ. ರಾಜ್ಯ ಮಟ್ಟದಲ್ಲಿ ಕರ್ನಾಟಕರಾಜ್ಯದ ದೈಹಿಕ ಶಿಕ್ಷಣ ಸಂಘದವರು ಕಳೆದ 10 ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ವಿನಂತಿಸಿದರೂ ಕೂಡ ತಮ್ಮ ಬೇಡಿಕೆ ಈಡೇರಲಿಲ್ಲ ಎಂದು ಹೇಳುವಂಥ ಮಾತನ್ನು ಪ್ರಸ್ತಾಪಿಸಿದ್ದಾರೆ.